

# ಕತಾತೂಂಬೊ ಕೋಲ್ಮಿಂಚಿನ ಸಂತೆ

ವರ್ಷದಲ್ಲಿ ಏಳೆಂಟು ತಿಂಗಳು ಸತತವಾಗಿ ಗುಡುಗು ಮಿಂಚು ಸಿಡಿಯುವ ತಾಣದ ಕತೆ ಇದು. ಪ್ರತಿ ರಾತ್ರಿಯಲ್ಲೂ 200ರಿಂದ 300 ಬಾರಿ ಇಲ್ಲಿ ಮಿಂಚು ಕೋರೈಸುತ್ತಿರುತ್ತದೆ. ಕೋಲ್ಮಿಂಚಿನ ನಿತ್ಯೋತ್ಸವವನ್ನು ನೋಡಲೆಂದೇ ಪ್ರವಾಸಿಗರು ಇಲ್ಲಿಗೆ ಬರುತ್ತಿರುತ್ತಾರೆ.

■ ನಾಗೇಶ ಹೆಗಡೆ

ದಕ್ಷಿಣ ಅಮೆರಿಕದ ನಕಾಶೆಯ ನೆತ್ತಿಯ ಮೇಲಿರುವ ವೆನೆಝುವೆಲಾ ದೇಶಕ್ಕೆ ಬನ್ನಿ. ಇಲ್ಲಿನ ಒಂದು ನದಿಯ ಹೆಸರು ಕತಾತೂಂಬೊ. ಅದು ಸಮುದ್ರಕ್ಕೆ ಕೂಡುವ ಮುನ್ನ ಮರಕಾಯಿಬೊ ಹೆಸರಿನ ಸರೋವರವನ್ನು ಸೇರುತ್ತದೆ.

ಇದು ಭೂಮಿಯ ಮೇಲಿನ ಅತಿ ಸಾಂದ್ರ ಸಿಡಿಲುಮಿಂಚಿನ ತಾಣ. ನಿಮಿಷಕ್ಕೆ 40, 50, ಕೆಲವೊಮ್ಮೆ 150 ಬಾರಿ ರಾತ್ರಿಯಿಡೀ ಇಲ್ಲಿನ ಆಕಾಶದಲ್ಲಿ ಮಿಂಚಿನ ಬಳ್ಳಿ ಮೂಡುತ್ತ ಮಾಯವಾಗುತ್ತಿರುತ್ತದೆ. ಜೊತೆಗೆ ಗುಡುಗು, ಸಿಡಿಲು; ಒಮ್ಮೊಮ್ಮೆ ನಿಶ್ಶಬ್ದದ ಬೆಳಕು.

ಕತಾತೂಂಬೊ ಹೆಸರಿನ ಅರ್ಥವೇ ‘ಮಿಂಚಿನ ಮನೆ’. ಇಲ್ಲಿನ ಭೂಸ್ವರೂಪ ವಿಶಿಷ್ಟವಾಗಿದೆ. ನಮ್ಮ ಪಶ್ಚಿಮ ಘಟ್ಟಗಳಂತಹ ಪರ್ವತ ಮಾಲೆಯಿಂದ ಅಂಕುಡೊಂಕಾಗಿ ನದಿ ಇಳಿದು ಬಂದು ಬೋಗುಣಿಯಂಥ ಸರೋವರಕ್ಕೆ ಸೇರುತ್ತದೆ. ನೆಲದ ಸೆಕೆಯಿಂದ ಸರೋವರದ ನೀರೆಲ್ಲ ಆವಿಯಾಗಿ ಮೇಲಕ್ಕೇರುತ್ತದೆ, ಮೋಡವಾಗುತ್ತದೆ. ಸಂಜೆ ವೇಳೆಗೆ ಸಮುದ್ರದ ಕಡೆಯಿಂದ ತಂಪುಗಾಳಿ ಬೀಸಿ ಬರುತ್ತದೆ. ಮೋಡ ಈಗ ಹನಿಗೂಡುತ್ತದೆ.

ಸೆಕೆ ಮತ್ತು ತೇವಾಂಶದಿಂದಾಗಿ ಮೋಡದ ಮೂಟೆಗೆ ವಿದ್ಯುದಾವೇಶ ಬರುತ್ತದೆ. ಹಾಗಾಗಿ ನಿತ್ಯವೂ ಜಂಗೀ ಕುಸ್ತಿ, ಖಡ್ಗಯುದ್ಧ, ಮೇಘನಾದ ಘಟೋತ್ಕಚರ ಆರ್ಭಟ ಕೇಳಿಬರುತ್ತದೆ.

ವಿದ್ಯುಲ್ಲತೆಗಳ ಈ ವಿದ್ಯಮಾನದ ಅಧ್ಯಯನಕ್ಕೆಂದು ಅದೆಷ್ಟೋ ವಿಜ್ಞಾನಿಗಳ ತಂಡಗಳು ಬಂದು ಹೋಗಿವೆ. ಅಮೆರಿಕದ ಬಾಹ್ಯಾಕಾಶ ಸಂಸ್ಥೆ ಇಲ್ಲಿನ ಮಿಂಚಿನ ಗೊಂಚಲುಗಳ ಉದ್ದ, ಎತ್ತರ, ಆಳಗಲಗಳನ್ನೆಲ್ಲ ಲೆಕ್ಕ ಮಾಡಿದೆ. ಪ್ರತಿ ಚದರ ಕಿಲೋ ಮೀಟರಿಗೆ 250 ಮಿಂಚುಗಳು ಹೊಮ್ಮುತ್ತವೆ ಎಂದು ಹೇಳಿದೆ. ಮಳೆ ಇರಲಿ, ಬೇಸಿಗೆ ಇರಲಿ, ವರ್ಷಕ್ಕೆ ಕಡೇಪಕ್ಷ 240 ರಾತ್ರಿಗಳಲ್ಲಿ ಇಲ್ಲಿ ಲೈಟ್ನಿಂಗ್ ಸಂಭವಿಸುತ್ತಿರುತ್ತದೆ.

ಈ ಮಿಂಚಿನ ಮಾಲೆ ಗಿನ್ನೆಸ್ ದಾಖಲೆಯಲ್ಲಂತೂ ಎಂದೋ ಸೇರಿದೆ. ಇಲ್ಲಿನ ಇಡೀ ಪ್ರದೇಶವನ್ನು ‘ವಿಶ್ವಪರಂಪರೆಯ ತಾಣ’ ಎಂದು ಯುನೆಸ್ಕೊ ಸಂಸ್ಥೆ ಗುರುತಿಸಿದೆ. ಮರಕಾಯಿಬೊ ಸರೋವರ ವೆನೆಝುವೆಲಾ ದೇಶದ ‘ಝೂಲಿಯಾ’ ರಾಜ್ಯಕ್ಕೆ ಸೇರಿದ್ದು, ಆ ರಾಜ್ಯದ ನಾಡಗೀತೆ ಮತ್ತು ನಾಡಧ್ವಜದಲ್ಲೂ ಮಿಂಚು ಮಿಂಚುತ್ತಿದೆ. ಇಡೀ ರಾಜ್ಯವೇ ನಮ್ಮ ಮಲೆನಾಡಿನಂಥ ಸದಾ ಹಸಿರಿನ ಕಗ್ಗಾಡಿನಿಂದ ಕೂಡಿದ್ದು, ಇಲ್ಲಿನ ವಿಶಿಷ್ಟ

